ಸ್ನೇಹಿತರ ಮನೆಯಲ್ಲಿ ಎರಡು ದಿನ ಬಚ್ಚಿಟ್ಟುಕೊಂಡು ಆಮೇಲೆ ಹೊರಗೆ ಬಂದಾಗ, ಹಿರಿಯರು ಸೇರಿ ನಾಲ್ಕು ಒದೆ ಕೊಟ್ಟು ಆಮೇಲೆ ಉದ್ಯಾನ ಈರಭದ್ರನ ಗುಡಿಯಲ್ಲಿ ಮದುವೆ ಮಾಡಿದರು. ಮದುವೆ ಕಳೆದು ಎರಡು ವರ್ಷಕ್ಕೆ ಮಗುವಾಗಿ ಮನೇಲಿ ಜಾಗವಿಲ್ಲ ಅಂತ ಅಲ್ಲೇ ಸಂಧಿಯಲ್ಲಿ ಇನ್ನೊಂದು ಮನೆ ಮಾಡಿದ. ನಿಧಾನಕ್ಕೆ ಆಸ್ತಿ ಕೇಳಲು ಶುರು ಮಾಡಿದ. 90 ಸೆಂಟ್ಸಲ್ಲಿ 45 ಸೆಂಟ್ಸು ಕೊಟ್ಟ ಗಳಿಗೆಗೆ ಅದನ್ನು ಮೈನಿಂಗ್‌ನವರಿಗೆ ಮಾರಿ ಸ್ವಂತ ಲಾರಿ ತಗಂಡು ದುಡಿಯಲು ಶುರು ಮಾಡಿದ. ಲಾಭ ಹೆಚ್ಚಿ ಹೊಸಪೇಟೆಯಲ್ಲಿ ಮನೆ ಮಾಡಿದ. ಅಲ್ಲೀತನಕ ದೂರವಿದ್ದ ಅವನ ಹೆಂಡತಿಯ ತವರಿನವರು ಮೆಲ್ಲಗೆ ಹತ್ತಿರವಾದರು. ಇವರು ಮೆಲ್ಲಗೆ ದೂರವಾಗತೊಡಗಿದರು. ಉಳಿದ ಭೂಮಿ ನೇಯ್ಗೆಯಿಂದ ಬದುಕು ಸುಲಭವಿರಲಿಲ್ಲ. ಆಗ ನಾಲ್ಕು ಬಂಗಾರದ ಅಂಗಡಿಗಳು, ಎಂಟು ತಳ್ಳುಗಾಡಿಗಳ ಮಾಲೀಕರಾದ ರೇವಣಕರ ಶೇಟ್ ಅವರ ಮನೆ ಬಾಗಿಲಿಗೆ ದಿನಾ ಹೋಗಿ ಹೊರಗೆ ನಿಲ್ಲುತ್ತಿದ್ದ. ಒಂದು ದಿನ, ರೈಲ್ವೆ ಸ್ಟೇಷನ್‌ನಲ್ಲಿದ್ದ ತಮ್ಮ ತಳ್ಳುಗಾಡಿಯನ್ನು ದಿನದ ಬಾಡಿಗೆಗೆ ಇವನಿಗೆ ಕೊಟ್ಟಿದ್ದರು. ಆದರೆ ಮುಂಚೆ ಸೇರಿದ್ದ ವಿಠಲನು ಬೆಳಗ್ಗೆ ನಿರ್ವಹಿಸುವಂತೆ, ಇವನಿಗೆ ರಾತ್ರಿ ನಿರ್ವಹಿಸುವಂತೆ ತಿಳಿಸಿದರು. ಅದರಂತೆ ಬೆಳಗ್ಗೆ ಕಾಲೇಜಿನಲ್ಲಿ ನಿದ್ದೆ ಹೊಡೆಯುತ್ತಾ ರಾತ್ರಿ ಚಹಾ ಅಂಗಡಿ ನೋಡುತ್ತಾ ದಾರಿ ಸವೆಸಿದ್ದ. ಆದರೆ, ಹಾಗೆ ಒಪ್ಪಿಕೊಂಡಾಗ ಇದ್ದ ಉತ್ಸಾಹ ಈಗಿರಲಿಲ್ಲ. ಬೆಳಗ್ಗೆ ಎಂತಹ ನಿದ್ದೆ ಬಂದರೂ ರಾತ್ರಿ ನಿದ್ದೆಗೆ ಸಮವಾಗಲಾರದು ಎಂದು ಅವನು ಬಹುಬೇಗ ಅರಿತ. ದೇವರು ಹಗಲು ಇಟ್ಟಿರುವುದು ದುಡಿತಕ್ಕಾಗಿ. ರಾತ್ರಿ ಇಟ್ಟಿರುವುದು ಸುಖಕ್ಕಾಗಿ ಎಂಬುದನ್ನು ಅವನ 23ರ ವಯಸ್ಸು ಅವನಿಗೆ ಸರಿಯಾಗಿ ತಿಳಿಸಿಬಿಟ್ಟಿತ್ತು. ಬೆಳಗ್ಗಿನ ಕಾಲೇಜಿನಲ್ಲಿ ಉತ್ಸಾಹದಿಂದ ಎಲ್ಲರೂ ಇರುತ್ತಿದ್ದರು. ಅವನು ಮಾತ್ರ ಮಂಕು ಕವಿದಂತೆ ಕಾಣುತ್ತಿದ್ದ. ವಾಲಿಬಾಲ್ ಆಡಲು ಕೈನೋವು, ಜೋರಾಗಿ ಓಡಲು ಕಾಲುನೋವು... ಹೀಗೆ ಬೆಳಗ್ಗೆ ಎಂಟರಿಂದ ಹನ್ನೊಂದರವರೆಗಿನ ಕಾಲೇಜು ಅವನಿಗೆ ಜೀವನವನ್ನು ನರಕವನ್ನಾಗಿ ಮಾಡಿಬಿಟ್ಟಿತ್ತು. ಇಷ್ಟೆಲ್ಲದರ ನಡುವೆಯೂ ಅವನು ತಪ್ಪಿಸದಂತೆ ಕಾಲೇಜಿಗೆ ಹೋಗಲು ಕಾರಣವೊಂದಿತ್ತು. ಅವಳೇ ಸುಮಂಗಲಾ. ಸಂಡೂರಿನಿಂದ ಬಂದು ವಿದ್ಯಾರ್ಥಿನಿಯರ ಹಾಸ್ಟೆಲ್‌ನಲ್ಲಿ ಉಳಿದುಕೊಂಡು ಕಾಲೇಜಿಗೆ ಬರುತ್ತಿದ್ದ, ಕ್ಲಾಸಿನಲ್ಲಿ ನಿದ್ದೆಗಣ್ಣಿನ ಇವನನ್ನೂ ನೋಡಿ ಒಮ್ಮೆ ನಕ್ಕಳು. ಆ ದಿನ ಕಾಲೇಜು ಮುಗಿಸಿ ತನ್ನ ಒಂದಂಕಣದ ರೂಮಿಗೆ ಮಧ್ಯಾಹ್ನ ಬಂದು ದಪ್ ಎಂದು ಬಿದ್ದಾಗ ಆವರಿಸಿದ ನಿದ್ದೆಯ ಕನಸಿನಲ್ಲಿ ಅವಳಿದ್ದಳು. ಅಲ್ಲಿಂದ ಶುರುವಾದ ಅವಳ ನೆನಪು ಅವನಿಗೆ ರಾತ್ರಿ ತೊಳೆಯುವ ಟೀ ಕಪ್ಪುಗಳ ನಡುವೆ ಬಂದು ಕಚಗುಳಿ ಇಟ್ಟಂತಾಗುತ್ತಿತ್ತು. ಆಗಾಗ ಬೆವರುತ್ತಾನೆ. ಆದರೆ ಪ್ರತಿಸಲ ಅವಳು ಎದುರಾದಾಗ ವಿಚಿತ್ರ ಸಂಗತಿಗಳು ನಡೆಯುತ್ತವೆ ಎನಿಸುತ್ತದೆ. ಅದೊಂದು ದಿನ ಅವಳು ಟಾಕೀಸ್‌ಗೆ ಹೋಗೋಣ ಎಂದಳು. ಅವನು ಕರೆದುಕೊಂಡು ಹೋದ. ಅವಳು ಮುಖಕ್ಕೆ ತನ್ನ ವೇಲ್ ಕಟ್ಟಿಕೊಂಡು ಬಂದಿದ್ದಳು. ಸೀಟಿನ ಕಡೆ ಬಂದು ಕೂತಳು. ಸಿನಿಮಾ ಶುರುವಾದಾಗ ನಿಧಾನಕ್ಕೆ ತಬ್ಬಿ ಹಿಡಿದಳು. ಕೈಯನ್ನು ತನ್ನ ಮೇಲೆ ಆನಿಸುವಂತೆ ಸೂಕ್ಷ್ಮನೋಟ ಬೀರಿದಳು. 23ರ ಅವನಿಗೆ ಆ ನೋಟದಲ್ಲಿದ್ದ ಭಾವ ತಕ್ಷಣ ಅರಿವಾಗತೊಡಗಿತ್ತು. ಕೆನ್ನೆಯ ತುಂಬಾ ಬೆವರು ಆವರಿಸಿತ್ತು. ಹೆಣ್ಣೇ ಆಸ್ವದ ಕೊಟ್ಟಾಗ ಬರುವ ಉತ್ಸಾಹ, ಭಯದಿಂದ ಕೂಡಿರುತ್ತದೆ ಎಂದು ಈಗ ಅನ್ನಿಸತೊಡಗಿತ್ತು. ಪ್ರೀತಿಸಿದವಳು ಏನು ಕೇಳಿದರೂ ಕೊಡಬೇಕೆನಿಸುವ ವಯಸ್ಸದು. ಕೈ ನಿಧಾನಕ್ಕೆ ಅವಳನ್ನೂ ಹಿಡಿದುಕೊಳ್ಳಲು ಹವಣಿಸಿತ್ತು. ಆದರೆ, ಅವನ ಮೂಗಿನ ಹೊಳ್ಳೆಗಳಿಗೆ ಇದ್ದಕ್ಕಿದ್ದಂತೆ ಚಹಾದ ಘಮಲು ಬಡಿಯತೊಡಗಿತು. ತಾನೀಗ ಇರಿಸುವ ತನ್ನ ಕೈಯನ್ನು ನೋಡಿಕೊಂಡಾಗ ಅದರಲ್ಲಿ ದಿನಾ ತೊಳೆಯುವ ನೂರಾರು ಜನರ ಗುಟುಕು ಎಂಜಲು ಕಾಣಿಸತೊಡಗಿತು. ಅವನು ಇನ್ನೊಮ್ಮೆ ಬೆವರಿದ. ಮಂಜಿನಂತೆ ನಿಶ್ಚಲವಾಗಿ ಕೈ ಹಿಂದಕ್ಕೆ ತೆಗೆದುಕೊಂಡ. ಇವನಿಂದ ನಿರೀಕ್ಷಿಸದ ಈ ನಿರಾಸಕ್ತಿಯನ್ನು ಗಮನಿಸಿ ಅವಳು ಸುಮ್ಮನಾದಳು.

ಅದೊಂದು ದಿನ ಅವಳು ಹೊಸಪೇಟೆಯ ಪ್ರಸಿದ್ಧ ಹೋಟೆಲ್‌ನಲ್ಲಿ ಕಾಫಿ ಕುಡಿಯಬೇಕೆಂದು ತಿಳಿಸಿದಾಗ ಅವನಿಗೆ ಮೈಯೆಲ್ಲ ಚುಚ್ಚುವಂತಾಯಿತು. ಎಷ್ಟು ಬಾರಿ ಅವಳನ್ನು ತನ್ನ ತಳ್ಳುಗಾಡಿಗೆ ಬರಲು ಪುಸಲಾಯಿಸಿದ್ದ! ಆದರೆ, ಇನ್ನಿಲ್ಲದ ನೆಪ ಹೇಳಿ ತಪ್ಪಿಸಿಕೊಳ್ಳುತ್ತಿದ್ದಳು.